**ಸಾಕ್ಷಿಯನ್ನು ದಿಃ *20/07/2023* ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

***ಪಾಟೀ ಸವಾಲು ಃ ಪ್ರತಿವಾದಿ ನಂ.2, 4 ರಿಂದ 6 ಪರ ವಕೀಲರಿಂದ***

ಛಾಯಾ ನನ್ನ ಮಗಳು ಎಂದರೆ ನಿಜ. ಸದರಿ ಛಾಯಾಳಿಗೆ ನ್ಯಾಯಾಲಯಕ್ಕೆ ಖುದ್ದಾಗಿ ಬಂದು ಸಾಕ್ಷವನ್ನು ನುಡಿಯಬಹುದು ಎಂದರೆ ಸಾಕ್ಷಿದಾರರು ನನ್ನ ಮಗಳು ಬೆಂಗಳೂರಿನ ಚೈತನ್ಯ ಎನ್ನುವ ಖಾಸಗಿ ಶಾಲೆಯಲ್ಲಿ ದುಡಿಯುತ್ತಿದ್ದ ಕಾರಣ ಅವಳಿಗೆ ಬರಲು ಆಗುವುದಿಲ್ಲ ಎಂದು ಹೇಳುತ್ತಾರೆ.

ದಾವಾದಾಸ್ತಿಯ ಖರೀದಿಯ ಕುರಿತು ನನಗೆ ವೈಯಕ್ತಿಕ ಮಾಹಿತಿ ಇದೆ ಎಂದರೆ ನಿಜ.ಖರೀದಿಯ ಸಲುವಾಗಿ ಒಂಬತ್ತು ಬಾರಿ ನಗದು ಹಣವನ್ನು ಕೊಟ್ಟು, ಜಗೆಯನ್ನು ಅಳತೆ ಮಾಡಿಕೊಂಡಿಯೇ ಖರೀದಿ ಮಾಡಿರುತ್ತೇವೆ ಎಂದರೆ ಸಾಕ್ಷಿದಾರರು ನಿಜ, ನಗದು ಮತ್ತು ಡಿಡಿ ಸಹ ಕೊಟ್ಟಿರುತ್ತೇನೆ ಎಂದು ಹೇಳುತ್ತಾರೆ. ನಾನು ಮಾರಾಟಗಾರರಿಗೆ ಭೇಟಿಯಾದಾಗ ಜಾಗೆಯ ಅಳತೆ ಕುರಿತು ಮತ್ತು ಬೇರೆ ಸಂಬಂಧಿತ ಮಾಹಿತಿಗಳನ್ನು ಪಡೆದುಕೊಂಡಿದ್ದೇನೆ ಎಂದರೆ ಸಾಕ್ಷಿದಾರರು ಅಳತೆ ಕುರಿತು ಮಾಹಿತಿ ಪಡೆದುಕೊಂಡಿಲ್ಲ ಎಂದು ಹೇಳುತ್ತಾರೆ. ಸಾಮಾನ್ಯವಾಗಿ ನಕಾಶೆಯ ಪ್ರಕಾರ ಜಾಗೆ ಇರಲಿಲ್ಲ ಎಂದರೆ ನೊಂದು ಆಗುವುದಿಲ್ಲ ಎಂದರೆ ನಿಜ. ಜಾಗೆಯ ನಕಾಶೆಯ ಪ್ರಕಾರವೇ ಖರೀದಿ ನೊಂದು ಆಗಿತ್ತು ಎಂದರೆ ನಿಜ. ಆ ಪ್ರಕಾರ 2 ಗುಂಟೆ 10 ಅಣೆ ಜಾಗೆಯ ಕಬ್ಜೆ ಸಹಿತ ಪಡೆದುಕೊಂಡಿದ್ದೇನೆ ಎಂದರೆ ನಿಜ. ಪ್ರತಿವಾದಿ ನಂ.1 ಇವರಿಗೆ ನಾವು ರಾಜಿ ಡಿಕ್ರಿಯ ಪ್ರಕಾರ ಎರಡುವರೆ ಗುಂಟೆ ಜಾಗೆಯನ್ನು ಕೊಟ್ಟಿರುತ್ತೇವೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಜಾಗೆಯ ಸರ್ವೇ ನಂಬರ 125 ರಲ್ಲಿ ಇರುತ್ತದೆ ಎಂದರೆ ಇರಬಹುದು. ಸರ್ವೇ ನಂಬರ 125 ಮತ್ತು ಸರ್ವೇ ನಂಬರ ½ ಬೇರೆ ಬೇರೆ ಇರುತ್ತವೆ ಎಂದರೆ ನಿಜ. ಸದರಿ ಎರಡು ಸರ್ವೇ ನಂಬರಗಳು ತಾಗಿಕೊಂಡು ಇರುವುದಿಲ್ಲ ದೂರ ದೂರ ಇರುತ್ತವೆ ಎಂದರೆ ಇರಬಹುದು. ಆದ್ದರಿಂದ ಅವರ ಜಾಗೆಗೆ ಸದರಿ ಪ್ರತಿವಾದಿ ನಂ.1 ಮತ್ತು ನಿಮ್ಮ ಜಾಗೆಗೆ ನೀವು ಕಬ್ಜೆಯಲ್ಲಿದ್ದರು ಸಹ ವಿನಾಃಕಾರಣ ಪ್ರತಿವಾದಿ ನಂ.2 ರಿಂದ 6 ಇವರಿಗೆ ತೊಂದರೆ ಕೊಡಬೇಕೆಂದು ಈ ದಾವೆಗೆ ಪಕ್ಷಗಾರರನ್ನಾಗಿ ಮಾಡಿದ್ದೇವ ಎಂದರೆ ಸರಿಯಲ್ಲ.

***ಮರು ವಿಚಾರಣೆ ಃ ಇಲ್ಲ.***

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

1 ನೇ ಹೆ ಹಿ ದಿ ನ್ಯಾ ಹಾಗೂ ಸಿಜೆಎಂ,

ಧಾರವಾಡ.